Sanction of the above infrastructure facilities, incentives and concessions is subject to the following terms and conditions:

1. **Environment:** The company to obtain Consent for Establishment and Consent for Operation from KSPCB and environmental clearance from MoEF, Govt. of India or the Dept of Forest, Ecology & Environment, Govt. of Karnataka, if applicable.

2. **Employment:** The Company shall comply with the provisions of Industrial Policy 2014-19 of Govt. of Karnataka with respect to local employment on the project. Prepare a plan for development of Human Resources required for the project, train local people. A copy of Human Resources Development plan shall be sent to the Commissioner for Industrial Development & Director of Industries and Commerce for monitoring.

3. **Vendor Development**: Wherever there is scope for vendor development for the project, the company shall prepare a vendor development plan, develop local vendors and procure the required inputs, components and sub-assemblies from these local vendor units. A copy of the vendor development plan shall be sent to the Commissioner for Industrial Development & Director of Industries and Commerce for monitoring.

4. **Social Infrastructure Development:** The Company is advised to take up social infrastructure development projects in the vicinity of the proposed location of the unit and comply with the stipulation of Company Act 2013. A copy of such projects shall be sent to the Commissioner for Industrial Development & Director of Industries and Commerce for monitoring.

5. Others:

a) The company shall adopt rainwater harvesting, waste water recycling and water conservation techniques. Zero discharge facility should be adopted wherever applicable.

b) The company shall take all statutory and other necessary clearances from the competent authorities including Govt. of India and shall submit milestones/progress in the implementation of the project regularly, which will be monitored by the Department.

c) The company shall provide at least one employment per family of land looser.

This approval is valid for a period of two years from the date of issue of this Government Order.

P.R. 277 By Order and in the name of the Governor of Karnataka

SC - 25 **S. UMADEVI**

Desk Officer (Technical Cell),

Commerce & Industries Department.

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 1 ಸೇನಿಸೇ 2014, ಬೆಂಗಳೂರು, ದಿನಾಂಕ: 04.02.2016.

ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ನಿಯಮಗಳಲ್ಲಿ ಸರ್ಕಾರಿ ನೌಕರರು ನಿಗದಿತ ಪ್ರತಿ ಬ್ಲಾಕ್ ಅವಧಿಯಲ್ಲಿ ತಮ್ಮ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು ನಗದೀಕರಣಕ್ಕಾಗಿ ಕ.ನಾ.ಸೇ.ನಿ ನಿಯಮ 118(2)ರಲ್ಲಿನ ನಿಬಂಧನೆಗಳಿಗೆ ಒಳಪಟ್ಟು ಅಧ್ಯರ್ಪಿಸಿ ರಜೆ ಸಂಬಳವನ್ನು ಪಡೆಯಲು ಅವಕಾಶಗಳನ್ನು ಹೊಂದಿರುವುದರಿಂದಲೂ;

ಇಂತಹ ರಜೆ ಸಂಬಳದ ಲೆಕ್ಕಾಚಾರದ ಉದ್ದೇಶಕ್ಕೆ ಕ.ನಾ.ಸೇ.ನಿ. ನಿಯಮ 118(1)ನ್ನು ಉಪನಿಯಮ (2) (vii) ಮತ್ತು (viii) ರೊಡನೆ ಓದಲಾದಂತೆ ರಜೆಯ ಪೂರ್ವದ ನಿಕಟ ಪೂರ್ವ ದಿನಾಂಕದಂದು ಪಡೆಯಲು ಹಕ್ಕನ್ನು ಹೊಂದಿರುವ ಮೂಲ ವೇತನ, ಅಂಗೀಕಾರರ್ಹವಿದ್ದಲ್ಲಿ ವಿಶೇಷ ಭತ್ಯೆ, ಮತ್ತು ಮೂಲ ವೇತನಕ್ಕೆ ಅನ್ವಯವಾಗುವಂಥ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ ಮತ್ತು ನಗರ ಪರಿಹಾರಭತ್ಯೆಗಳ ಪರಿಗಣನೆಗೆ ಅವಕಾಶಗಳಿರುವುದರಿಂದಲೂ;

ಆದರೆ ಹಲವು ಸರ್ಕಾರಿ ಇಲಾಖೆಗಳಡಿಯಲ್ಲಿ ಕರ್ತವ್ಯ ನಿರ್ವಹಿಸುವ ನೌಕರರಿಗೆ ಬಾಡಿಗೆ ರಹಿತ ಅಥವಾ ಉಚಿತ ಸರ್ಕಾರಿ ವಸತಿ ಗೃಹಗಳು ಹಂಚಿಕೆಯಾದಾಗ ತಮ್ಮ ವೇತನದೊಂದಿಗೆ ಮನೆಬಾಡಿಗೆ ಭತ್ಯೆ ಪಡೆಯದಿರುವುದರಿಂದ, ಈ ನಿಯಮಾನುಸಾರ ಈ ಭತ್ಯೆಯನ್ನು ರಜೆ ಸಂಬಳದ ಉದ್ದೇಶಕ್ಕೆ ಪರಿಗಣಿಸಲು ಅವಕಾಶವಿರುವುದಿಲ್ಲದರಿಂದಲೂ;

ಸರ್ಕಾರಿ ವಸತಿ ಗೃಹಗಳನ್ನು ಲೈಸನ್ಸ್ ಫೀ ಆಧಾರದ ಮೇರೆಗೆ ಪಡೆದಿರುವ ಇತರೆ ಸಿಬ್ಬಂದಿ, ಬಾಡಿಗೆ ಅಥವಾ ಸ್ವಂತ ಮನೆಗಳಲ್ಲಿ ವಾಸಿಸುತ್ತಿರುವ ಸಿಬ್ಬಂದಿಗಳು ತಮ್ಮ ವೇತನದೊಂದಿಗೆ ಮನೆ ಬಾಡಿಗೆ ಭತ್ಯೆಯನ್ನು ಪಡೆದು, ಅವರುಗಳ ರಜೆ ಸಂಬಳದ ಉದ್ದೇಶಕ್ಕಾಗಿ ಮನೆ ಬಾಡಿಗೆ ಭತ್ಯೆಯು ಪರಿಗಣಿತವಾಗುವುದರಿಂದಲೂ, ಈ ವರ್ಗದ ಮತ್ತು ಬಾಡಿಗೆರಹಿತ/ಉಚಿತ ಸರ್ಕಾರಿ ವಸತಿ ಗೃಹಗಳಲ್ಲಿ ವಾಸಿಸುವ ಸಿಬ್ಬಂದಿಯ ನಡುವೆ ತಾರತಮ್ಯಕ್ಕೆ ಕಾರಣವಾಗುವುದರ ಜೊತೆಗೆ ಹೆಚ್ಚುವರಿ ಒಂದು ತಿಂಗಳ ಮನೆ ಬಾಡಿಗೆ ಭತ್ಯೆ ಕಟಾವಣೆಯಾಗುವ ಪರಿಣಾಮದಿಂದಾಗಿ ಅವರಿಗೆ ಅನಾವಶ್ಯಕ ತೊಂದರೆ ಉಂಟಾಗಿರುವುದರಿಂದಲೂ;

ನಿಯಮಗಳಲ್ಲಿನ ನಿಬಂಧನೆಗಳಿಂದಾಗಿ ಇಂತಹ ಸಿಬ್ಬಂದಿಗಳಿಗೆ ಉಂಟಾಗುವ ತೊಂದರೆ ನಿವಾರಿಸುವುದು ಮತ್ತು ಅದಕ್ಕೆ ಅನುಷಂಗಿಕವಾದ ಅವಕಾಶಗಳನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದಲೂ;

ಸರ್ಕಾರವು, ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ನಿಯಮ 7ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರದ ಎಲ್ಲ ಇಲಾಖೆಗಳಡಿಯಲ್ಲಿ ಬಾಡಿಗೆ ರಹಿತ ಅಥವಾ ಉಚಿತ ಸರ್ಕಾರಿ ವಸತಿಗೃಹಗಳು ಹಂಚಿಕೆಯಾಗಿರುವ ಸಿಬ್ಬಂದಿಗಳ ಪ್ರಕರಣಗಳಲ್ಲಿ, ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳು 1958ರ ನಿಯಮ 118(2)ರಲ್ಲಿನ ಗಳಿಕೆ ರಜೆ ನಗದೀಕರಣಕ್ಕಾಗಿ ಹಾಗೂ ಪತ್ರಾಂಕಿತ ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸುವುದಕ್ಕಾಗಿ ಪರಿಹಾರವಾಗಿ ರಜೆ ಸಂಬಳವನ್ನು ಪಡೆಯುತ್ತಿರುವ ಯಾವುದೇ ಇಲಾಖೆಯಡಿಯಲ್ಲಿನ ನಿರ್ದಿಷ್ಟ ಸಿಬ್ಬಂದಿಗಳ ಪ್ರಕರಣಗಳಲ್ಲಿ ಮಾತ್ರ, ಅಂತಹ ರಜೆ ಸಂಬಳದ ಉದ್ದೇಶಕ್ಕಾಗಿ, ರಜೆ ಸಂಬಳದ ಪರಿಗಣನೆಯ ನಿಕಟ ಪೂರ್ವ ದಿನಾಂಕದಂದು ಅವರು ಪಡೆಯುತ್ತಿರುವ ಮೂಲ ವೇತನ ಮತ್ತು ಇತರೆ ಅರ್ಹ ಭತ್ಯೆಗಳೊಂದಿಗೆ ಅವರು ಕರ್ತವ್ಯ ನಿರ್ವಹಿಸುವ ಸ್ಥಳಕ್ಕೆ ಮತ್ತು ವೇತನಕ್ಕೆ ಅನುಗುಣವಾಗಿ ಅರ್ಹವಾಗುವ ಪ್ರಮಾಣಾನುಸಾರದ ಮನೆಬಾಡಿಗೆ ಭತ್ಯೆಯನ್ನು ಸಹ ಸೇರಿಸಿ ಪಾವತಿಗೆ ಪರಿಗಣಿಸಲು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಸ್. ಸುವರ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ. (ಸೇವೆಗಳು)

PR. 192

SC.50

Information Technology, Biotechnology and Science and Technology Secretariat

Sub: Re-constitution of Karnataka IT Vision Group-orders reg.

Read: 1. G.O. No.ITD 2 PRM 2005, dated: 25th November, 2006.

2. G.O.No. ITD 11 PRM 2011, Dated: 29th August, 2011.

Preamble:

In the Government Order read at (1) above, Vision Group on IT was constituted under the chairmanship of Shri.N.R.Narayana Murthy, for suggesting and making recommendations to Government on Suitable course of action to be taken for implementation of the IT Policy and to advise on various issues relating to IT. Subsequently, after the retirement of Shri. N.R.Narayana Murthy, Government, vide order read at (2) above, re-constituted the Vision Group on IT, under the chairmanship of Shri. S. Gopalakrishnan, Chief Executive Officer & Managing Director, Infosys Technologies Limited, Bengaluru.

2. Government, in the meantime, has unveiled policy initiatives under the Karnataka i^4 Policy to retain the pre-eminent leadership position of Karnataka in IT, ITeS, BPO and other IT related activities. There is a huge potential market for electronic products and therefore due emphasis has been given to Electronic Systems Design and manufacturing in the ESDM Policy. Karnataka State has also emerged as a destination for innovation and Start-ups, and the Karnataka Start-up Policy 2015-2020 was unveiled in

Novemeber, 2015, In view of the new initiatives of the Department of IT, BT and S & T, Government of Karnataka, aimed at giving a new dimension and thrust to encouraging entrepreneurship, setting-up of incubation centres, upgradation of skills, spreading IT to other towns and cities of the State etc., it has now been decided to re-constitute the Vision Group on IT.

3. Hence the order.

GOVERNMENT ORDER NO. ITD 35 PRM 2015, BENGALURU, DATED: 02.01.2016.

Government is pleased to re-constitute Karnataka Vision Group on IT under the Chairmanship of Shir. S. Gopalakrishnan, Co-founder and Executive Vice-Chairman, Infosys Ltd. with the following as members:

Sl.No.	Name	Designation and Company Name	
1	Mr. S. Gopalakrishnan (Kris)	Co-Founder & Executive Vice-Chairman, Infosys Ltd.,	Chairman
2	Ms. V. Manjula, IAS	Principal Secretary to Government, Dept. of IT, BT and S & T, Gok	Member
3	Mr. Vijay Ratnaparkhe	Managing Director, BOSCH	Member
4	Shri Krishnakumar Natarajan	CEO & MD, Mindtree	Member
5	Mr. M.N. Vidyashankar	President, IESA	Member
6	Shri. P.K. Das	Director, STPI	Member
7	Shri. R. Chandrasekaran	Executive Vice Chairman, Congnizant	Member
8	Prof. Sadagopan	Director, IIIT-B	Member
9	Mr. T.K. Kurien	CEO, IT Business & Executive Director, WIPRO	Member
10	Mr. Pravin Rao	Chief Operating Officer, Infosys	Member
11	Dr. H. Maheshappa	Vice-Chancellor, Visvesvaraya Technological University, Belagavi	Member
12	Prof. Swapan Bhattacharya	Director, NITK, Suratkal	Member
13	Mr. Jayant R. Haritsa	Senior Professor Supercomputer Education and Research Centre (SERC) And Department of Computer Science and Automation (CSA), Indian Institute of Science (IISc) Bengaluru, India	Member
14	Mr. Sharad Sharma	Co-founder and Governing Council Member, iSPIRT Foundation	Member
15	Mr. B.V. Naidu	Chairman and CEO, SAGITAUR	Member
16	Mr. Naganand Doraswamy	President, TiE	Member
17	Mr. Bhaskar Pramanik	Chairman, Microsoft India	Member
18	Ms. Tanusree Deb Barma, IAS	Director, IT and BT, GoK	Member Secretary

2. The re-constituted IT Vision Group shall make specific recommendations and suggestions to State Government on suitable course of action to be taken for implementation of various initiatives for the growth and development of ICT, Electronics and Start-ups in the State of Karnataka. The re-constituted Vision Group shall also mentor the State's flagship IT event, namely, Bengaluru ITE.biz.

3. The re-constituted Vision Group shall be in force until further orders.

By order and in the name of the Governor of Karnataka,

Shidramappa H. Talawar,

Under Secretary to Government,

Department of Information Technology, Biotechnology and Science & Technology.

PR. 193

SC. 200

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರದ ಸುತ್ತಮುತ್ತಲಿನ ಕೆರೆಗಳ ಒತ್ತುವರಿದಾರರ ಅಹವಾಲು ಕುಂದುಕೊರತೆಗಳನ್ನು ಸ್ವೀಕರಿಸಲು ಸಮಿತಿ ರಚಿಸಿರುವ ಬಗ್ಗೆ–ಉಪ ವಿಭಾಗಾಧಿಕಾರಿಗಳ ಸಮಿತಿಯ ಪರಿಷ್ಕರಣೆ ಕುರಿತು.

ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 32 ಎಲ್ ಜಿಬಿ 2015, ದಿನಾಂಕ: 07.01.2015(2).

ಪ್ರಸ್ತಾವನೆ:

ದಿನಾಂಕ: 18.01.2016ರಂದು ಕಂದಾಯ ಭವನದಲ್ಲಿ ನಡೆದ ಕೆರೆ ಒತ್ತುವರಿ ಸದನ ಸಮಿತಿ ಸಭೆಯಲ್ಲಿ ಬೆಂಗಳೂರು ನಗರದ ಸುತ್ತಮುತ್ತಲಿನ ಕೆರೆಗಳ ಒತ್ತುವರಿದಾರರ ಅಹವಾಲು ಕುಂದುಕೊರತೆಗಳನ್ನು ಸ್ವೀಕರಿಸಲು ತಹಶೀಲ್ದಾರವರ ನೇತೃತ್ವದಲ್ಲಿ ರಚಿಸಿರುವ ಸಮಿತಿ ಹಾಗೂ ಸ್ವೀಕರಿಸಿದ ಅಹವಾಲುಗಳನ್ನು ಪರಿಶೀಲನೆ ಮಾಡಲು ಉಪ ವಿಭಾಗಾಧಿಕಾರಿಗಳ ಸಮಿತಿಯನ್ನು ರಚಿಸಿ ಮೇಲೆ ಓದಲಾದ ದಿನಾಂಕ: 07.01.2016ರ ಸರ್ಕಾರಿ ಆದೇಶ ಕುರಿತು. ಚರ್ಚಿಸಿರುತ್ತದೆ.

ಮುಂದುವರೆದು, ಉಪ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಆ ಸಮಿತಿಯ ಸಹಾಯಕ್ಕಾಗಿ ಉಪ ವಿಭಾಗಾಧಿಕಾರಿಗಳು ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಅವರ ವಿವೇಚನೆಗೆ ಬಿಟ್ಟಿರುವುದಕ್ಕೆ ಬದಲಾಗಿ ನಿರ್ದಿಷ್ಟವಾಗಿ ಸಂಬಂಧಪಟ್ಟ ಕೆಲವು ಅಧಿಕಾರಿಗಳನ್ನು ಸಮಿತಿಯ ಸದಸ್ಯರಾಗಿ ನೇಮಿಸಿ ಪರಿಷ್ಕೃತ ಆದೇಶ ಹೊರಡಿಸಲು ತೀರ್ಮಾನಿಸಲಾಗಿದೆ. ಈ ಬಗ್ಗೆ ತಹಶೀಲ್ದಾರವರ ನೇತೃತ್ವದಲ್ಲಿ ರಚಿಸಿರುವ ಸಮಿತಿಯ ಸದಸ್ಯರನ್ನು ಹೊರತುಪಡಿಸಿ ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡಂತೆ ಉಪ ವಿಭಾಗಾಧಿಕಾರವರ ನೇತೃತ್ವದ ಸಮಿತಿಯನ್ನು ಮೇಲೆ ಓದಲಾದ ಆದೇಶವನ್ನು ಮಾರ್ಪಡಿಸಿ ಹೊರಡಿಸಲು ಸರ್ಕಾರವು ಪರಿಶೀಲಿಸಿ ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 32 ಎಲ್.ಜಿ.ಬಿ 2015, ಬೆಂಗಳೂರು, ದಿನಾಂಕ: 29.01.2016.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 32 ಎಲ್‌ಜಿಬಿ 2015, ದಿನಾಂಕ: 7.01.2016 (2)ನ್ನು ಮಾರ್ಪಡಿಸಿ ತಹಶೀಲ್ದಾರ್ ರವರ ನೇತೃತ್ವದಲ್ಲಿ ಕೆರೆ ಉಸ್ತುವಾರಿ ಪ್ರಾಧಿಕಾರ ಸಮಿತಿ ನೀಡಿದ ಒತ್ತುವರಿದಾರರ ಅರ್ಜಿಗಳನ್ನು/ಅಹವಾಲುಗಳನ್ನು ಉಪ ವಿಭಾಗಾಧಿಕಾರಿಗಳ ಸಮಿತಿ ಪರಿಶೀಲಿಸಿ ಒತ್ತುವರಿದಾರರ ವಿವರಗಳನ್ನು ವಿಂಗಡನೆ ಮಾಡಿ ತದನಂತೆ ಒಂದು ಸುಧೀರ್ಘ ವರದಿಯನ್ನು ಸದನ ಸಮಿತಿಗೆ ಸಲ್ಲಿಸಲು ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆಯಾಯ ಉಪ ವಿಭಾಗದ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿ ಆದೇಶಿಸಿದೆ:–

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	
1	ಉಪ ವಿಭಾಗಾಧಿಕಾರಿ, ಬೆಂಗಳೂರು ಉತ್ತರ ಉಪ ವಿಭಾಗ ಉಪ ವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ ಉಪ ವಿಭಾಗ ಉಪ ವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪ ವಿಭಾಗ	ಅಧ್ಯಕ್ಷರು ಅಧ್ಯಕ್ಷರು ಅಧ್ಯಕ್ಷರು
2	ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	ಸದಸ್ಯರು
3	ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	ಸದಸ್ಯರು
4	ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.	ಸದಸ್ಯರು
5	ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ	ಸದಸ್ಯರು
6	ಕೆರೆ ಅಭಿವೃದ್ಧಿ ಪ್ರಾಧಿಕಾರದ ಪ್ರತಿನಿಧಿ	ಸದಸ್ಯರು
7	ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತದ ಪ್ರತಿನಿಧಿ	ಸದಸ್ಯರು
8	ಸಂಬಂಧಪಟ್ಟ ಅರಣ್ಯ ವಲಯಾಧಿಕಾರಿ [ಆರ್.ಎಫ್.ಓ]	ಸದಸ್ಯರು
9	ಸಹಾಯಕ ನಿರ್ದೇಶಕರು, ಭೂ ದಾಖಲೆಗಳ ಇಲಾಖೆ	ಸದಸ್ಯ ಕಾರ್ಯದರ್ಶಿ

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಅವಶ್ಯವಿರುವೆಡೆ ಸದರಿ ಸಮಿತಿಯು ಜಾರಿದಳದ ಉಪ ವಿಭಾಗಾಧಿಕಾರಿಗಳ ನೆರವು ಪಡೆಯುವುದು. ಅಲ್ಲದೆ ಸದರಿ ಸಮಿತಿಯು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಭೂ ಮಂಜೂರಾತಿ ವಿಷಯ ನಿರ್ವಹಿಸುತ್ತಿರುವ ಶಿರಸ್ತೇದಾರ್‌ರವರ ನೆರವನ್ನು ಪಡೆಯಲು ಸಹ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಎಲ್. ಮಹಾಂತೇಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ. (ಭೂ ಮಂಜೂರಾತಿ–1)

PR. 194
SC.100

ಕಾರ್ಮಿಕ ಸಚಿವಾಲಯ

ಸೇರ್ಪಡೆ/ತಿದ್ದುಪಡಿ ಆದೇಶ

ಸಂ: ಕಾಇ 471 ಎಲ್‌ಎಸ್‌ಐ 2013, ಬೆಂಗಳೂರು, ದಿನಾಂಕ: 17.02.2016.

ಸರ್ಕಾರದ ಆದೇಶ ಸಂಖ್ಯೆ: ಕಾಇ 471 ಎಲ್‌ಎಸ್‌ಐ 2013, ದಿನಾಂಕ: 28.12.2015ರಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಖಾಲಿ ಇರುವ ವಿಮಾ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಷರತ್ತುಗಳನ್ವಯ ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಆದೇಶ ಭಾಗದಲ್ಲಿನ ವಲಯವಾರು ಖಾಲಿ ಹುದ್ದೆಗಳ ಸಂಖ್ಯೆಯನ್ನು ಈ ಕೆಳಗಿನಂತೆ ತಿದ್ದಿ ಓದಿಕೊಳ್ಳುವುದು:–

ಕ್ರ.ಸಂ.	ವಲಯದ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ
1	ಬೆಂಗಳೂರು ಮತ್ತು ತುಮಕೂರು ವಲಯ	18
2	ಮೈಸೂರು ವಲಯ	10
3	ಶಿವಮೊಗ್ಗ ವಲಯ	02
4	ದಾವಣಗೆರೆ ವಲಯ	03
5	ಧಾರವಾಡ ವಲಯ	14
6	ದಾಂಡೇಲಿ ವಲಯ	06
7	ಮಂಗಳೂರು ವಲಯ	27
8	ಬೆಳಗಾವಿ ವಲಯ	17
9	ಕಲಬುರಗಿ ವಲಯ	03
ಒಟ್ಟು:		**100**

ಹಾಗೇಯೇ ದಿನಾಂಕ: 28.12.2015ರ ಆದೇಶ ಭಾಗದಲ್ಲಿನ ಷರತ್ತುಗಳು ಸೇರಿದಂತೆ ಈ ಕೆಳಗಿನ ಷರತ್ತುಗಳನ್ನು ಸೇರಿಸಿ ಓದಿಕೊಳ್ಳುವುದು.

1) ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ 100 ವಿಮಾ ವೈದ್ಯಾಧಿಕಾರಿಗಳಿಗೆ ಮಾಸಿಕ ಸಂಚಿತ ವೇತನ ₹.40,000/–(ಇತರೆ ಯಾವುದೇ ಪ್ರತ್ಯೇಕ ಭತ್ಯೆಗಳಿಲ್ಲದೆ) ನೀಡುವುದು.

2) ಗುತ್ತಿಗೆ ಆಧಾರದಲ್ಲಿ ವೈದ್ಯರುಗಳನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ನೇರ ನೇಮಕಾತಿಗೆ ನಿಗದಿಪಡಿಸಲಾದ ಮೀಸಲಾತಿ ನಿಯಮಗಳನುಸಾರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವುದು. ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಗರಿಷ್ಠ 40–65ರ ವಯೋಮಿತಿಯೊಳಗಿನ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಆದೇಶ ಸಂ: ಕಾಇ 392 ಎಲ್‌ಎಸ್‌ಐ 2011, ದಿ: 20.12.2011ರ ಆದೇಶವನ್ನು ಪಾಲಿಸುವುದು.

3) ವೈದ್ಯರುಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಹೈದ್ರಬಾದ್–ಕರ್ನಾಟಕ ವಲಯದ ಮೀಸಲಾತಿ ಮತ್ತು ಅಂಗವಿಕಲ ಮೀಸಲಾತಿಯನ್ನು ಕಾಯ್ದುಕೊಳ್ಳುವುದು.

4) ಹಾಗೆಯೇ ಈ ಗುತ್ತಿಗೆ ಆಧಾರಿತ ನೇಮಕಾತಿಯಲ್ಲಿ ಅರ್ಹತೆ ಮತ್ತು ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಲಕ್ಷ್ಮೀದೇವಿ
ಪೀಠಾಧಿಕಾರಿ
ಕಾರ್ಮಿಕ ಇಲಾಖೆ. (ಕಾರಾವಿ ಯೋ (ವೈ) ಸೇವೆಗಳು)

PR. 195
SC.50

ತೋಟಗಾರಿಕೆ ಮತು ರೇಷ್ಮೆ ಸಚಿವಾಲಯ

ಅಧಿಸೂಚನೆ

ಸಂ: ತೋಇ 243 ರೇಕೃವಿ 2015, ಬೆಂಗಳೂರು, ದಿನಾಂಕ: 12.02.2016.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 44 ಎಸ್‌ಎಲ್‌ಪಿ 90, ದಿನಾಂಕ: 14.03.1990 ರಲ್ಲಿ ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ ಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯ್ದೆ, 1959ರ ಪರಿಚ್ಛೇದ 10(1)ಎ ರಡಿ ರೇಷ್ಮೆ ಬೆಳೆಗಾರರ ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆದಾರರ ಉಪಯೋಗಕ್ಕಾಗಿ ಹಾವೇರಿ ಜಿಲ್ಲೆಯ ಹಾವೇರಿ ಹಾಗೂ ಇನ್ನಿತರ ತಾಲ್ಲೂಕುಗಳಲ್ಲಿ ರೇಷ್ಮೆ ಮಾರುಕಟ್ಟೆ ಸ್ಥಾಪನೆಗೆ ಅನುಮತಿ ನೀಡಿ ಅಧಿಸೂಚಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ತೋಇ 95 ರೇಕೃವಿ 2011, ದಿನಾಂಕ: 20.01.2012ರಲ್ಲಿ ಹಾವೇರಿ ಹಾಗೂ ಇನ್ನಿತರ ಮಾರುಕಟ್ಟೆಯಲ್ಲಿ ಕಾರ್ಯ ಪ್ರಾರಂಭವಾಗಿರುವುದಿಲ್ಲವಾದ್ದರಿಂದ ಹಾವೇರಿ ಜಿಲ್ಲೆಯ ಹಾವೇರಿ ಹಾಗೂ ಇನ್ನಿತರೆ ತಾಲ್ಲೂಕುಗಳಲ್ಲಿರುವ ರೇಷ್ಮೆಗೂಡು ಮಾರುಕಟ್ಟೆಗಳನ್ನು ಸ್ಥಗಿತಗೊಳಿಸಿ ಆದೇಶಿಸಲಾಗಿದೆ.

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ರೇಷ್ಮೆ ಕೃಷಿಗೆ ಹೆಚ್ಚು ಒತ್ತು ನೀಡಿ ರೇಷ್ಮೆ ಬೆಳೆಗಾರರು ರೇಷ್ಮೆ ಕೃಷಿಯನ್ನು ಕೈಗೊಳ್ಳುತ್ತಿದ್ದು, ಹೆಚ್ಚಿನ ಪ್ರಮಾಣದಲ್ಲಿ ರೇಷ್ಮೆಗೂಡು ಉತ್ಪಾದನೆಯಾಗುತ್ತಿದೆ. ಗೂಡಿನ ಉತ್ಪಾದನೆ ಆಧರಿಸಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಸ್ವಯಂಚಾಲಿತ ರೀಲಿಂಗ್ ಘಟಕಗಳು ಪ್ರಾರಂಭವಾಗುತ್ತಿದ್ದು ಈ ರೀಲಿಂಗ್ ಘಟಕಗಳಿಗೆ ನಿರಂತರ ಗೂಡಿನ ಸರಬರಾಜು ಅವಶ್ಯವಿರುವುದರಿಂದ ಬೆಳಗಾವಿ ವಿಭಾಗದ ಇತರೆ ಜಿಲ್ಲೆಗಳಲ್ಲಿ ಸ್ಥಾಪಿಸಲಾಗುವ ಸ್ವಯಂಚಾಲಿತ ರೀಲಿಂಗ್ ಘಟಕಗಳಿಗೆ ಮತ್ತು ಹಾಲಿ ಹಾವೇರಿ ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ರೀಲಿಂಗ್ ಘಟಕಕ್ಕೂ ಅನುಕೂಲವಾಗುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ತೋಇ 95 ರೇಕೃವಿ 2011, ದಿನಾಂಕ: 20.01.2012ರಲ್ಲಿ ಸ್ಥಗಿತಗೊಳಿಸಲಾಗಿರುವುದನ್ನು ಭಾಗಶ: ಮಾರ್ಪಡಿಸಿ, ಹಾವೇರಿ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ ಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯ್ದೆ 1959ರ ಪರಿಚ್ಛೇದ 10(1)ಎ ರಡಿ ಪುನರ್ ಸ್ಥಾಪಿಸಿ ಅಧಿಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್. ಎಲ್. ಚಿನ್ನಮ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ),
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

PR. 196

PERSONNEL AND ADMINISTRATIVE REFORMS SECRETARIAT

Sub: Extension of deputation period of Maj Sourabh Yadav, ADC to Governor of Karnataka.

Read:
1. Government Order No. DPAR 06 PRB 2014, dated: 14.03.2014.
2. Letter No. GS 88 EST 2013, dated: 21.12.2015.
3. Letter No. Col MS-3C, AHQ/MOD ID No.2(20), /2013-D(MS), Dated: 14.10.2015 by Ministry of Defence.

Preamble:

In the Government order read at (1) IC-71224, Maj Sourabh Yadav, ENGRS was appointed as ADC to Governor of Karnataka for a period of 2 years with effect from 10.01.2014.

In the letter read at (2), The Under Secretary to Governor (Admn.), Raj Bhavan, Bengaluru has asked to extend the period of deputation of Maj Sourabh Yadav, ADC to Governor of Karnataka for a period of six (6) months from 09.01.2016 as per the concurrence given by Ministry of Defence in its letter read at (3).

The proposal has been examined and the following order is issued:

Government Order No. DPAR 06 PRB 2014, Bengaluru, Dated: 20.02.2016.

Government has agreed for extension of deputation period of Maj Sourabh Yadav, (IC-71224) ADC to Governor of Karnataka, for a period of six (6) months from 09-01-2016. The terms and condtions for the extended period of deputation will be same as issued with Government Order No. DPAR 06 PRB 2014, dated: 14.03.2014 and even numbered addendum dated; 25.02.2015.

This Order is issued with the concurrence of the Finance Department vide note No. FD 64 SE-1/2016, dated: 03.02.2016.

By Order and in the name of the Governor of Karnataka,

R. Mahadeva

Under Secretary to Government,

DPAR (Political)

PR. 197
SC.100

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಸವದತ್ತಿ ಹತ್ತಿರ ರೇಣುಕಾ ಸಾಗರ ಜಲಾಶಯದಿಂದ ನರಗುಂದ ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯನ್ನು ಅಂದಾಜು ಮೊತ್ತ ₹ 6300.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒಚ ಮಂಡಳಿ ರವರ ಪತ್ರ ಸಂಖ್ಯೆ: ಕಜಮಂ:ವ್ಯ.ನಿ/ಮುಅ(ಉ)/ಆಶ್ರೇಕಾಪಾಅ(ಬೆ)/ಉಮುಅ–2/ತಾಸ–1/ಸಅ–3/2015–16/1681 ದಿನಾಂಕ: 30.09.2014 ಮತ್ತು 07.12.2015.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 30.09.2014 ಮತ್ತು 07.12.2015ರ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ನರಗುಂದ ಪಟ್ಟಣವು ಗದಗ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, ಜಿಲ್ಲಾ ಕೇಂದ್ರ ಗದಗದಿಂದ 60 ಕಿ.ಮೀ. ದೂರದಲ್ಲಿರುತ್ತದೆ. ಇಲ್ಲಿಯ ಜನರ ಮುಖ್ಯ ಉದ್ಯೋಗ ಕೃಷಿ ಮತ್ತು ವ್ಯಾಪಾರವಾಗಿದ್ದು, 2011ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆಯು 36,291 ಇದ್ದು, ಹಾಲಿ ಜನಸಂಖ್ಯೆ ಸುಮಾರು 39.000 ಇರುತ್ತದೆ. ಸಧ್ಯಕ್ಕೆ ಪಟ್ಟಣಕ್ಕೆ ನರಗುಂದ ಉಪ–ಕಾಲುವೆ ಮತ್ತು ಪಟ್ಟಣದಲ್ಲಿ ಕೊರೆಯಲಾದ ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ನರಗುಂದ ಉಪ–ಕಾಲುವೆಯಲ್ಲಿ ನೀರಿನ ಹರಿವು ಇರುವಾಗ ನೀರನ್ನು ಪಂಪು ಮಾಡಿ, 5.45 ಎಂ.ಎಲ್.ಡಿ. ಸಾಮರ್ಥ್ಯದ ಜಲಶುದ್ಧೀಕರಣ ಘಟಕದ ಹತ್ತಿರ ಇರುವ ಶೇಖರಣ ಕೆರೆಯಲ್ಲಿ ನೀರನ್ನು ಸಂಗ್ರಹ ಮಾಡಿಕೊಳ್ಳಲಾಗುತ್ತಿದೆ. ನರಗುಂದ ಉಪ–ಕಾಲುವೆ ಮೂಲವಾಗಿಟ್ಟುಕೊಂಡು ದಿನಂಪ್ರತಿ ತಲಾ 70 ಲೀಟರ್ ನೀರು ಸರಬರಾಜು ಪರಿಗಣಿಸಿದ, ಮಂಡಳಿಯು ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡು 1999ರಲ್ಲಿ ಕಾರ್ಯಗತಗೊಳಿಸಿ, ನಂತರ ಮುಂದಿನ ನಿರ್ವಹಣೆಗೆ ಯೋಜನೆಯನ್ನು ಪುರಸಭೆ, ನರಗುಂದ ಇವರಿಗೆ 2001ರಲ್ಲಿ ಹಸ್ತಾಂತರಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ಮುಂದುವರೆದು, 2009ನೇ ಸಾಲಿನ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ನರಗುಂದ ಪಟ್ಟಣದ ಸುತ್ತಲಿನ ಪ್ರದೇಶಗಳಲ್ಲಿ ಸುರಿದ ಮಳೆಯಿಂದ ಅಂತರ್ಜಲದ ನೀರಿನ ಮಟ್ಟವು ಹೆಚ್ಚಾಗಿ, ಸಾರ್ವಜನಿಕ ಆಸ್ತಿಗಳಿಗೆ ಹಾನಿಯಾಗಿರುತ್ತದೆ. ಅಂತರ್ಜಲದ ಮಟ್ಟ ಹೆಚ್ಚಾಗಲು ಕಾರಣವನ್ನು ಮತ್ತು ಅದಕ್ಕೆ ಸೂಕ್ತ ಪರಿಹಾರೋಪಾಯಗಳನ್ನು ಗುರುತಿಸಲು ಸದರಿ ಕಾರ್ಯವನ್ನು ಮೆ॥ ಸಿವಿಲ್ ಏಡ್ ಟೆಕ್ನೋಕ್ಲಿನಿಕ್, ಬೆಂಗಳೂರು (ಕನ್ಸಲ್ಟಂಟ್) ಇವರಿಗೆ ವಹಿಸಲಾಗಿತ್ತು. ಸಲಹೆಗಾರರು ಸ್ಥಳಕ್ಕೆ ಭೇಟಿ ನೀಡಿ, ಅವಶ್ಯಕವಾದ ಪರೀಕ್ಷೆಗಳನ್ನು ನಡೆಸಿ ಹಾಗೂ ಈ ವಿಷಯದಲ್ಲಿ ಹಿರಿಯ ಭೂ ವಿಜ್ಞಾನಿಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಿಜಾಪೂರ ಇವರು ಸರ್ವೆ ಕಾರ್ಯ ಕೈಗೊಂಡು ನೀರು ಶೇಖರಣಾ ಕೆರೆಯಲ್ಲಿ ತಾತ್ಕಾಲಿಕವಾಗಿ ನೀರು ಶೇಖರಣೆ ಮಾಡುವುದನ್ನು ಸ್ಥಗಿತಗೊಳಿಸಲು ಹಾಗೂ ಸದರಿ ಕಾಲುವೆಯಿಂದ ಕೆರೆಗೆ ನೀರು ತುಂಬುವುದನ್ನು ಸ್ಥಗಿತಗೊಳಿಸಿ ಶೇಖರಣಾ ಕೆರೆಯನ್ನು ಮಳೆಯ ನೀರಿನ ಶೇಖರಣೆಗೆ ಉಪಯೋಗಿಸಬಹುದು ಎಂದು ವರದಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿ ಯೋಜನೆಯ ಅಂದಾಜನ್ನು ಲೋಕೋಪಯೋಗಿ ಇಲಾಖೆಯ 2014–15ನೇ ಸಾಲಿನ ಮುಂದುವರೆದು ದರಪಟ್ಟಿ ದರಗಳಂತೆ ಮತ್ತು 2015–16ನೇ ಸಾಲಿನ ಮಂಡಳಿ ದರಪಟ್ಟಿಯಂತೆ ಮತ್ತು ದರಪಟ್ಟಿಯಲ್ಲಿ ಇಲ್ಲದ ಐಟಂಗಳಿಗೆ ಮಾರುಕಟ್ಟೆ ದರಗಳನ್ನು ಅಳವಡಿಸಿ ತಯಾರಿಸಲಾಗಿದೆ. ಆರ್ಥಿಕ ಇಲಾಖೆಯು ಸಹಮತಿಸಿರುವ ಮೊತ್ತಕ್ಕೆ ಸೀಮಿತಗೊಳಿಸಿದ್ದು, ಸದರಿ ಅಂದಾಜು ಪಟ್ಟಿಯ ಮೊತ್ತ ₹.6300.00 ಲಕ್ಷಗಳಾಗಿರುತ್ತದೆ. ಸದರಿ ಅಂದಾಜು ಪಟ್ಟಿಯಲ್ಲಿ ಶೇಕಡಾ 3% ಕಂಟಿಜೆನ್ಸಿ, 12% ಇಟಿಪಿ, 1% ಲೇಬರ್ ಸೆಸ್, 0.50% 3ನೇ ಸಂಸ್ಥೆಯ ತಪಾಸಣೆ ವೆಚ್ಚ, 1.5% ಕೆಪಾಸಿಟಿ ಬಿಲ್ಡಿಂಗ್ ಮತ್ತು ತರಬೇತಿ ಸಂಬಂಧ 1.5.% ಸರ್ವೆ ಮತ್ತು ವಿನ್ಯಾಸ ಹಾಗೂ ನಕ್ಷೆಗಳ ಸಂಬಂಧ ಮತ್ತು **ಭೂಸ್ವಾಧೀನ ವೆಚ್ಚ ಒಳಗೊಂಡಿರುತ್ತದೆ.**

ಸದರಿ ಯೋಜನೆಗೆ ಸ್ಥಳೀಯ ಸಂಸ್ಥೆಯು ದಿನಾಂಕ: 27.11.2013ರಲ್ಲಿ ಠರಾವು ಪಾಸು ಮಾಡಿರುತ್ತದೆ. ದಿನಾಂಕ: 21.11.2015ರಂದು ನಡೆದ ಮಂಡಳಿ ಸಭೆಯಲ್ಲಿ ನಿರ್ಣಯಿಸಿರುವಂತೆ ಸವದತ್ತಿ ಹತ್ತಿರ ರೇಣುಕಾ ಸಾಗರ ಜಲಾಶಯದಿಂದ ನರಗುಂದ ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ₹ 6300.00 ಲಕ್ಷಗಳ ಅಂದಾಜು ಪಟ್ಟಿಯ ಪ್ರಸ್ತಾವನೆಯನ್ನು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರು ಶಿಫಾರಸ್ಸು ಮಾಡಿ, ಸದರಿ ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ ಅನುದಾನ (ಶೇ.75%)	₹ 4725.00 ಲಕ್ಷಗಳು
ಹಣಕಾಸು ಸಂಸ್ಥೆಗಳಿಂದ ಸಾಲ (ಶೇ.20%)	₹ 1260.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ಪಾಲು (ಶೇ.5%)	₹ 315.00 ಲಕ್ಷಗಳು
ಒಟ್ಟು:	**₹ 6300.00 ಲಕ್ಷಗಳು**

ಸರ್ಕಾರವು ಸವದತ್ತಿ ಹತ್ತಿರ ರೇಣುಕಾ ಸಾಗರ ಜಲಾಶಯದಿಂದ ನರಗುಂದ ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯನ್ನು ಅಂದಾಜು ಮೊತ್ತ ₹.6300.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 22 ಯುಡಬ್ಲ್ಯೂಎಸ್ 2014, ಬೆಂಗಳೂರು, ದಿನಾಂಕ: 24.02.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸವದತ್ತಿ ಹತ್ತಿರ ರೇಣುಕಾ ಸಾಗರ ಜಲಾಶಯದಿಂದ ನರಗುಂದ ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯನ್ನು ಅಂದಾಜು ಮೊತ್ತ ₹.6300.00 ಲಕ್ಷಗಳಲ್ಲಿ (ಆರು ಸಾವಿರದ ಮುನ್ನೂರು ಲಕ್ಷ ರೂಪಾಯಿಗಳು ಮೊತ್ತ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಕೈಗೆತ್ತಿಕೊಳ್ಳಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. ಈ ಯೋಜನೆಗೆ ತಗಲುವ ಯಾವುದೇ ಹೆಚ್ಚುವರಿ ಮೊತ್ತವನ್ನು ಸ್ಥಳೀಯ ಸಂಸ್ಥೆಯಿಂದಲೇ ಭರಿಸತಕ್ಕದ್ದು.
2. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ, 1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು 2000 ಹಾಗೂ E-Proc Portal ಮುಖಾಂತರ ಕೈಗೊಂಡ ಟೆಂಡರ್‌ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಂತರ ಮುಂದಿನ ಕ್ರಮ ವಹಿಸತಕ್ಕದ್ದು.
3. ಈ ಯೋಜನೆಗೆ ಸಂಬಂಧಪಟ್ಟಂತೆ ಯೋಜನೆ ಜಾರಿ ಇರುವ ಪೂರ್ಣಾವಧಿಯಲ್ಲಿ ಗುಣಮಟ್ಟ ಹಾಗೂ ಪ್ರಮಾಣಗಳ ತಪಾಸಣೆಗಾಗಿ Third Party Consultants ಅನ್ನು ನೇಮಿಸಿಕೊಳ್ಳುವುದು.
4. ಸದರಿ ಕಾಮಗಾರಿಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 782 ವೆಚ್ಚ–9/2014, ದಿನಾಂಕ: 25.03.2015.ರ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವೈ. ಗೋಪಾಲ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

PR. 213

ಒಳಾಡಳಿತ ಸಚಿವಾಲಯ

ವಿಷಯ: ಬೆಂಗಳೂರು ನಗರ ಪೊಲೀಸ್ ಕಮೀಷನರ್ ಕಛೇರಿಯ ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳ ಕಾರ್ಯವನ್ನು ಮರು ಹಂಚಿಕೆ ಮಾಡುವ ಕುರಿತು.

ಓದಲಾಗಿದೆ: ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರ ಸಂಖ್ಯೆ. ಆರ್.ಎಲ್.ಎನ್(3)/16/2014–15, ದಿನಾಂಕ: 2.9.2014.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 2.9.2014 ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಬೆಂಗಳೂರು ನಗರದಲ್ಲಿ ಪೊಲೀಸ್ ಆಯುಕ್ತರು ಮತ್ತು ಉಪ ಪೊಲೀಸ್ ಆಯುಕ್ತರುಗಳ ನಡುವೆ ಆದೇಶಗಳನ್ನು ಪಾಲಿಸುವಲ್ಲಿ ಪ್ರಸ್ತುತ 5 ಹಂತಗಳಿದ್ದು, ನಾನಾ ತರಹದ ಸಲಹೆ ಸೂಚನೆಗಳಿಂದ ಗೊಂದಲ ಉಂಟಾಗುತ್ತಿದೆ. ಅಪರಾಧ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ವಿಭಾಗಗಳನ್ನು

ನಿರ್ವಹಿಸಲು ಬೇರೆ ಬೇರೆ ಹೆಚ್ಚುವರಿ ಪೊಲೀಸ್ ಆಯುಕ್ತರುಗಳಿದ್ದು, ಸದರಿ ವಿಭಾಗಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಪ್ರಸ್ತುತ ಇರುವ 7 ವಲಯ ಉಪ ಪೊಲೀಸ್ ಆಯುಕ್ತರುಗಳ ಪೈಕಿ ಕ್ರಮವಾಗಿ 4 ಮತ್ತು 3 ವಲಯಗಳನ್ನು ಹೆಚ್ಚುವರಿ ಪೊಲೀಸ್ ಆಯುಕ್ತರು (ಪೂರ್ವ) ಮತ್ತು ಹೆಚ್ಚುವರಿ ಪೊಲೀಸ್ ಆಯುಕ್ತರು (ಪಶ್ಚಿಮ) ರವರಿಗೆ ಹಂಚಿಕೆ ಮಾಡಲು ಅನುಕೂಲವಾಗುವಂತೆ ಹೆಚ್ಚುವರಿ ಪೊಲೀಸ್ ಆಯುಕ್ತರು (ಕಾನೂನು ಮತ್ತು ಸುವ್ಯವಸ್ಥೆ) ಹಾಗೂ ಹೆಚ್ಚುವರಿ ಪೊಲೀಸ್ ಆಯುಕ್ತರು (ಅಪರಾಧ) ರವರುಗಳ ಪದನಾಮವನ್ನು ಹೆಚ್ಚುವರಿ ಪೊಲೀಸ್ ಆಯುಕ್ತರು (ಪೂರ್ವ) ಮತ್ತು ಹೆಚ್ಚುವರಿ ಪೊಲೀಸ್ ಆಯುಕ್ತರು (ಪಶ್ಚಿಮ) ಎಂದು ಮರುಪದನಾಮೀಕರಿಸುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಈಗಿರುವ ವ್ಯವಸ್ಥೆಯ ಪ್ರಕಾರ ಹೆಚ್ಚುವರಿ ಪೊಲೀಸ್ ಆಯುಕ್ತರು (ಕಾನೂನು ಮತ್ತು ಸುವ್ಯವಸ್ಥೆ) ಹಾಗೂ ಹೆಚ್ಚುವರಿ ಪೊಲೀಸ್ ಆಯುಕ್ತರು (ಅಪರಾಧ) ಎಂಬ ಎರಡು ಹೆಚ್ಚುವರಿ ಪೊಲೀಸ್ ಆಯುಕ್ತರ ಹುದ್ದೆಗಳು ಇದ್ದು, ಈ ಇಬ್ಬರು ಅಧಿಕಾರಿಗಳು ಪೊಲೀಸ್ ಆಯುಕ್ತರು, ಬೆಂಗಳೂರು ಇವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಾರೆ. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಅಪರಾಧಕ್ಕೆ ಸಂಬಂಧಪಟ್ಟಂತೆ ಹಲವು ಪ್ರಕರಣಗಳು ನಿರ್ದಿಷ್ಟವಾಗಿ ಅಪರಾಧ ಅಥವಾ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟವುಗಳು ಎಂದು ವರ್ಗೀಕರಣ ಮಾಡುವುದು ಕಷ್ಟಸಾಧ್ಯ ಮತ್ತು ಅವರ ಅಧೀನದಲ್ಲಿ ಕೆಲಸ ಮಾಡುವಂತಹ ಉಪ ಪೊಲೀಸ್ ಆಯುಕ್ತರುಗಳಿಗೂ ಸಹ ಈ ಇಬ್ಬರು ಹೆಚ್ಚುವರಿ ಪೊಲೀಸ್ ಆಯುಕ್ತರುಗಳಿಗೆ ಪ್ರತ್ಯೇಕವಾಗಿ ಅಂದರೆ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟಂತೆ ಹೆಚ್ಚುವರಿ ಪೊಲೀಸ್ ಆಯುಕ್ತರು (ಕಾನೂನು ಮತ್ತು ಸುವ್ಯವಸ್ಥೆ), ಅಪರಾಧಕ್ಕೆ ಸಂಬಂಧಪಟ್ಟಂತೆ ಹೆಚ್ಚುವರಿ ಪೊಲೀಸ್ ಆಯುಕ್ತರು (ಅಪರಾಧ) ಇವರಿಂದ ಮಾರ್ಗದರ್ಶನ ಪಡೆಯುವ ಅಗತ್ಯತೆ ಇರುವುದರಿಂದ (chain of command) ಪ್ರತ್ಯೇಕವಾಗಿ ದಿನನಿತ್ಯದ ಕೆಲಸಗಳಿಗೆ ಕಷ್ಟವಾಗುತ್ತಿದೆ. ಆದ್ದರಿಂದ, ಈ ವ್ಯವಸ್ಥೆ ಬದಲಾಗಿ ಇಬ್ಬರು ಹೆಚ್ಚುವರಿ ಪೊಲೀಸ್ ಆಯುಕ್ತರುಗಳನ್ನು ಭೌಗೋಳಿಕವಾಗಿ ಮಾರ್ಪಡಿಸಿದಲ್ಲಿ ಪರಿಣಾಮಕಾರಿ ಆಡಳಿತ ದೃಷ್ಟಿಯಿಂದ ಇದು ಹೆಚ್ಚು ಅನುಕೂಲ ಆಗುತ್ತದೆ ಮತ್ತು ಕಮೀಷನರೇಟ್ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಉಪ ಪೊಲೀಸ್ ಆಯುಕ್ತರುಗಳಿಗೂ ತಮ್ಮ ಕೆಲಸಕ್ಕೆ ಸಂಬಂಧಪಟ್ಟಂತೆ ಮೇಲಾಧಿಕಾರಿಗಳನ್ನು ಸಂಪರ್ಕಿಸುವ ಬಗ್ಗೆ ಯಾವುದೇ ಗೊಂದಲ ಇರುವುದಿಲ್ಲ. ಆದ್ದರಿಂದ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ. ಹೆಚ್‌ಡಿ 258 ಪಿಓಪಿ 2014, ಬೆಂಗಳೂರು, ದಿನಾಂಕ: 6.3.2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಕೆಳಕಂಡ ಹುದ್ದೆಗಳನ್ನು ಮರು ನಾಮಕರಣ ಮಾಡಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪುನರ್ ವಿಂಗಡಣೆ ಮಾಡಿ ಅನುಮೋದನೆ ನೀಡಲಾಗಿದೆ.

ಅ) ಹೆಚ್ಚುವರಿ ಪೊಲೀಸ್ ಆಯುಕ್ತರು (ಕಾನೂನು ಮತ್ತು ಸುವ್ಯವಸ್ಥೆ) ಹುದ್ದೆಯನ್ನು ಹೆಚ್ಚುವರಿ ಪೊಲೀಸ್ ಆಯುಕ್ತರು (ಪಶ್ಚಿಮ) ಎಂದು ಮರು ನಾಮಕರಣ ಮಾಡಿದ್ದು, ಅವರ ಅಧೀನದಲ್ಲಿ ಈ ಕೆಳಗಿನ ಉಪ ಪೊಲೀಸ್ ಆಯುಕ್ತರು ಕೆಲಸ ನಿರ್ವಹಿಸುವುದು.

1) ಉಪ ಪೊಲೀಸ್ ಆಯುಕ್ತರು (ದಕ್ಷಿಣ)

2) ಉಪ ಪೊಲೀಸ್ ಆಯುಕ್ತರು (ಪಶ್ಚಿಮ)

3) ಉಪ ಪೊಲೀಸ್ ಆಯುಕ್ತರು (ಕೇಂದ್ರ)

4) ಉಪ ಪೊಲೀಸ್ ಆಯುಕ್ತರು (ಉತ್ತರ)

ಆ) ಹೆಚ್ಚುವರಿ ಪೊಲೀಸ್ ಆಯುಕ್ತರು (ಅಪರಾಧ) ಹುದ್ದೆಯನ್ನು ಹೆಚ್ಚುವರಿ ಪೊಲೀಸ್ ಆಯುಕ್ತರು (ಪೂರ್ವ) ಎಂದು ಮರು ನಾಮಕರಣ ಮಾಡಿದ್ದು, ಅವರ ಅಧೀನದಲ್ಲಿ ಈ ಕೆಳಗಿನ ಉಪ ಪೊಲೀಸ್ ಆಯುಕ್ತರು ಕೆಲಸ ನಿರ್ವಹಿಸುವಂತೆ ಆದೇಶಿಸಲಾಗಿದೆ.

1) ಉಪ ಪೊಲೀಸ್ ಆಯುಕ್ತರು (ಪೂರ್ವ)

2) ಉಪ ಪೊಲೀಸ್ ಆಯುಕ್ತರು (ಈಶಾನ್ಯ)


3) ಉಪ ಪೊಲೀಸ್ ಆಯುಕ್ತರು (ಆಗ್ನೇಯ)

ಮುಂದುವರೆದು, ಹಾಲಿ ಇರುವ ಉಪ ಪೊಲೀಸ್ ಆಯುಕ್ತರು (ಅಪರಾಧ-2) ಹುದ್ದೆಯನ್ನು ಉಪ ಪೊಲೀಸ್ ಆಯುಕ್ತರು (ಕಮಾಂಡ್ ಸೆಂಟರ್ ಅಂಡ್ ಸೆಕ್ಯುರಿಟಿ) ಎಂದು ಸಹ ಮರು ನಾಮಕರಣ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಆರ್.ಪುಟ್ಟೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ. (ಪೊಲೀಸ್ ವೆಚ್ಚ)

ಸರ್ಕಾರದ ಆದೇಶ ಸಂಖ್ಯೆ:ಒಇ 258 ಪಿಓಪಿ 2014, ದಿನಾಂಕ:06/03/2015 ರ ಆದೇಶಕ್ಕೆ ಅನುಬಂಧ.



ಹೆಚ್.ಆರ್.ಪುಟ್ಟೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ. (ಪೊಲೀಸ್ ವೆಚ್ಚ)

PR. 660
SC. 50

WATER RESOURCES SECRETARIAT

Sub : Procedures for effecting NPS deductions of Government employees and AIS Officers working on Foreign Service who come under the purview of NPS architecture set up by the PFRDA.

Ref :
1. GO No.FD (Spl) 219 PEN 2012, Dated: 30-01-2014
2. Letter from the Director, CADA Directorate Vide No.NikaNi/ C-2 / Non-HRMS / NPS / 2014-15/498, Dated:20-07-2015.

PREAMBLE:

The Government of Karnataka vide Government order No. FD (Spl) 219 PEN 2012 Dated:30-01-2014 has directed the organizations that Government Employees and AIS Officers working on Foreign Service and who come under the purview of NPS shall adopt the NPS architecture set up by the PFRDA for effecting NPS deductions and other related activities of such employees. Hence, the following order.

Government Order No.WRD 26 CAK 2015, Dated: 23-03-2016.

Government of Karnataka is pleased to designate the Chief Accounts Officers of concerned CADA authorities, as Non Treasury Pay & Accounts Officer(PAO) and DDO under the NPS architecture set up by the PFRDA for effecting NPS deductions of Government Officers / Employees and AIS Officers working on Foreign Service in COMMAND AREA DEVELOPMENT AUTHORITIES.

Sl.No	Details of Non-treasury PAO	Details of Non-treasury DDO
1	Chief Accounts Officer O/o the Administrator Command Area Development Authority, Cauvery Irrigation Project MYSURU.	Chief Accounts Officer O/o the Administrator Command Area Development Authority, Cauvery Irrigation Project MYSURU.
2	Chief Accounts Officer O/o the Administrator Command Area Development Authority, Tungabhadra Project, MUNIRABAD.	Chief Accounts Officer O/o the Administrator Command Area Development Authority, Tungabhadra Project, MUNIRABAD.
3	Chief Accounts Officer O/o the Administrator Command Area Development Authority, Malaprabha & Ghataprabha Projects, BELAGAVI.	Chief Accounts Officer O/o the Administrator Command Area Development Authority, Malaprabha & Ghataprabha Projects, BELAGAVI.
4	Chief Accounts Officer O/o the Administrator Command Area Development Authority, Upper Krishna Project, BHEEMARAYANAGUDI.	Chief Accounts Officer O/o the Administrator Command Area Development Authority, Upper Krishna Project, BHEEMARAYANAGUDI.
5	Chief Accounts Officer O/o the Administrator Command Area Development Authority, Bhadra Project Zone, SHIVAMOGGA.	Chief Accounts Officer O/o the Administrator Command Area Development Authority, Bhadra Project Zone, SHIVAMOGGA.
6	Chief Accounts Officer O/o the Administrator Command Area Development Authority, Irrigation Project Zone, KALABURAGI.	Chief Accounts Officer O/o the Administrator Command Area Development Authority, Irrigation Project Zone, KALABURAGI.

By Order and in the name Of the Governor of Karnataka

Mahadevayya Mathapati

Under Secretary to Government,

Water Resources Department (CADA).

PR-254

SC-50

ಸಹಕಾರ ಸಚಿವಾಲಯ

ವಿಷಯ : 2015–16ನೇ ಸಾಲಿನಲ್ಲಿ ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯನ್ನು ಅನುಷ್ಠಾನಗೊಳಿಸಲು ಪೂರಕ ಅಂದಾಜು–3ರ ಅನುದಾನದ ಮೊತ್ತವನ್ನು ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ:ಸಇ 22 ಅಂಆಸ 2015, ದಿನಾಂಕ: 08–05–2015.
2. ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ: 16–06–2015, 21–08–2015 ಮತ್ತು ದಿನಾಂಕ:11–09–2015. (ತಿದ್ದೋಲೆ), ದಿನಾಂಕ: 19–12–2015 ಮತ್ತು 08–02–2016.
3. ಸರ್ಕಾರಿ ಆದೇಶ ಸಂಖ್ಯೆ:ಆಇ 18 ವೆಚ್ಚ–2/2016, ಬೆಂಗಳೂರು ದಿನಾಂಕ: 22–01–2016.
4. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಆರ್‌ಸಿಎಸ್/ಯಶಸ್ವಿನಿ/13/2015–16, ದಿನಾಂಕ:17–03–2016.
5. ಸರ್ಕಾರಿ ಆದೇಶ ಸಂಖ್ಯೆ:ಆಇ 290 ಬಿಆರ್‌ಎಸ್ 2015, ದಿನಾಂಕ: 26–03–2016

ಪ್ರಸ್ತಾವನೆ:

2015–16ನೇ ಸಾಲಿನಲ್ಲಿ ಸಹಕಾರ ಇಲಾಖೆಯಲ್ಲಿ ಯಶಸ್ವಿನಿ ಯೋಜನೆಗಳನ್ನು ಮುಂದುವರೆಸಿದ್ದು, ಲೆಕ್ಕಶೀರ್ಷಿಕೆ 2425–00–108–0–57 ರಲ್ಲಿ ಗ್ರಾಮೀಣ ಯಶಸ್ವಿನಿ ಯೋಜನೆಗೆ ₹.9901.00 ಲಕ್ಷಗಳು ಮತ್ತು ನಗರ ಯಶಸ್ವಿನಿ ಯೋಜನೆಗೆ ₹.1100.00 ಲಕ್ಷಗಳಂತೆ ಒಟ್ಟು ₹.11001.00 ಲಕ್ಷಗಳ ಆಯವ್ಯಯ ಅವಕಾಶ ಕಲ್ಪಿಸಿ ಮುಂದುವರೆದ ಯೋಜನೆಗಳೆಂದು ಓದಲಾದ (1)ರ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶಗಳಲ್ಲಿ ಯಶಸ್ವಿನಿ ಯೋಜನೆಯಲ್ಲಿ ಒಟ್ಟು ನಾಲ್ಕು ಕಂತುಗಳಲ್ಲಿ ಗ್ರಾಮೀಣ ಯಶಸ್ವಿನಿ ಯೋಜನೆಯಡಿ ₹.8215.15 ಲಕ್ಷ ಮತ್ತು ನಗರ ಯಶಸ್ವಿನಿ ಯೋಜನೆಯಡಿ ₹.841.00 ಲಕ್ಷ, ಒಟ್ಟು ₹.9056.15 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ಓದಲಾದ (3)ರ ಸರ್ಕಾರದ ಆದೇಶದಲ್ಲಿ ಯಶಸ್ವಿನಿ ಯೋಜನೆಯಡಿ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆಗಳಲ್ಲಿ ಹೆಚ್ಚುವರಿಯಾಗಿದ್ದ ಮೊತ್ತ ₹.1900.00 ಲಕ್ಷಗಳನ್ನು ಸರ್ಕಾರಕ್ಕೆ ಆಧ್ಯರ್ಪಿಸಲಾಗಿದೆ.

ಓದಲಾದ (4)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಪೂರಕ ಅನುದಾನದಲ್ಲಿ ಹೆಚ್ಚುವರಿಯಾಗಿ ₹.3500.00 ಲಕ್ಷಗಳನ್ನು ಒದಗಿಸಿ ಬಿಡುಗಡೆಗೆ ಕೋರಿರುತ್ತಾರೆ. ಈವರೆಗೆ ಬಿಡುಗಡೆಯಾಗಿರುವ ಪೂರ್ಣ ಮೊತ್ತ ರೂ.9056.15 ಲಕ್ಷಗಳು ಬಳಕೆಯಾಗಿರುವುದಾಗಿ ದೃಢೀಕೃತ ಬಳಕೆ ಪ್ರಮಾಣ ಪತ್ರ ನೀಡಿರುತ್ತಾರೆ.

ಓದಲಾದ (5)ರ ಸರ್ಕಾರದ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯ ವೆಚ್ಚಗಳನ್ನು ಭರಿಸುವ ಸಲುವಾಗಿ ₹.1900.00 ಲಕ್ಷಗಳ ಹೆಚ್ಚುವರಿ ಮೊತ್ತವನ್ನು 2015–16ನೇ ಸಾಲಿನ ಪೂರಕ ಅಂದಾಜು–3ರಲ್ಲಿ ಬಿಡುಗಡೆ ಮಾಡಿರುವುದಾಗಿ ಮತ್ತು ಸದರಿ ಮೊತ್ತವನ್ನು ಅನುದಾನ ಸಂಖ್ಯೆ 09ರಡಿ ಪೂರಕ ಅಂದಾಜು–3ರಲ್ಲಿ ಸಕ್ರಮಗೊಳಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಿಬಂಧಕರ ಕೋರಿಕೆಯನ್ನು ಪುರಸ್ಕರಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 159 ಸಿಎಲ್‌ಎಸ್ 2015, ಬೆಂಗಳೂರು, ದಿನಾಂಕ: 28–03–2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2015–16ನೇ ಸಾಲಿಗೆ ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪೂರಕ ಅಂದಾಜು–3ರಲ್ಲಿ ಒದಗಿಸಿರುವ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗಿದೆ.

ಗ್ರಾಮೀಣ ಯಶಸ್ವಿನಿ ಯೋಜನೆ (ಮೊತ್ತ ₹. ಲಕ್ಷಗಳಲ್ಲಿ)

ಕ್ರ.ಸಂ.	ಲೆಕ್ಕ ಶೀರ್ಷಿಕೆ	ವಿವರ	ಬಿಡುಗಡೆ ಮಾಡಬೇಕಾದ ಮೊತ್ತ
1.	2425–00–108–0–57–059	ಇತರೆ ಖರ್ಚುಗಳು	1900.00

ಈ ಮೊತ್ತವನ್ನು ಹಣ ಸ್ವೀಕೃತಿ ರಸೀದಿ ಮೇಲೆ ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಇವರ ಮೇಲುರುಜುವಿನೊಂದಿಗೆ ಸಹಕಾರ ಸಂಘಗಳ ಅಪರ ನಿಬಂಧಕರು ಕೈಗಾರಿಕೆ ಮತ್ತು ಹೈನುಗಾರಿಕೆ, ಸಹಕಾರ ಸಂಘಗಳ ನಿಬಂಧಕರ ಕಛೇರಿ ಇವರಿಗೆ ಖಜಾನೆಯಿಂದ ಗ್ರಾಮೀಣ ಯಶಸ್ವಿನಿ ಯೋಜನೆಗೆ ಡ್ರಾ ಮಾಡಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿರುವ ಯಶಸ್ವಿನಿ ಟ್ರಸ್ಟ್‌ನ ಗ್ರಾಮೀಣ ಯಶಸ್ವಿನಿ ಯೋಜನೆಯ ಉಳಿತಾಯ ಖಾತೆಗೆ ಜಮಾ ಮಾಡಲು ಅಧಿಕಾರ ನೀಡಲಾಗಿದೆ.

ಈ ಆದೇಶವನ್ನು ಸರ್ಕಾರದ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 23 ವೆಚ್ಚ–2/2016, ದಿನಾಂಕ: 23–03–2016ರ ಸಹಮತಿಯ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 290 ಬಿಆರ್‌ಎಸ್ 2015, ದಿನಾಂಕ: 26–03–2016ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ವೆಂಕಟಸ್ವಾಮಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ,

ಸಹಕಾರ ಇಲಾಖೆ.

PR-255

SC-25

ಇಂಧನ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಇಎನ್ 70 ವಿಎಸ್‌ಸಿ 2015 ಬೆಂಗಳೂರು, ದಿನಾಂಕ: 18-03-2016.

ಸರ್ಕಾರದ ಆದೇಶ ಸಂಖ್ಯೆ: ಇಎನ್ 69 ವಿಎಸ್‌ಸಿ 2014 ದಿನಾಂಕ: 20-09-2014ರ ಕಂಡಿಕೆ 5 (c) ರಲ್ಲಿ

"ಪ್ರತಿ ತಿಂಗಳ ಬಳಕೆಯನ್ನು ಲೆಕ್ಕ ಹಾಕಿ ಆರು ತಿಂಗಳಿಗೊಮ್ಮೆ ನಿವ್ವಳ ವಿದ್ಯುತ್‌ಗೆ ಬೆಲೆ ಪಾವತಿ ಮಾಡಲಾಗುವುದು"

ಎಂಬುದರ ಬದಲಾಗಿ

"ಪ್ರತಿ ತಿಂಗಳ ಬಳಕೆಯನ್ನು ಲೆಕ್ಕ ಹಾಕಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿವ್ವಳ ಮಾಪನ ವ್ಯವಸ್ಥೆಯಡಿಯಲ್ಲಿ ರೂಪಿಸಿರುವ ಮಾನದಂಡಗಳಂತೆ ಬೆಲೆ ಪಾವತಿ ಮಾಡಲಾಗುವುದು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

PR-256

ಜಿ.ಎನ್. ಯಡ್ರಾವಿ
ಸರ್ಕಾರದ ಉಪ ಕಾರ್ಯದರ್ಶಿ,
ಇಂಧನ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : 2016-17ನೇ ಸಾಲಿಗೆ ಸ್ನಾತಕೋತ್ತರ ದಂತ ವೈದ್ಯಕೀಯ ಡಿಗ್ರಿ / ಡಿಪ್ಲೊಮಾ ಕೋರ್ಸುಗಳಲ್ಲಿ ಬಾಕಿ ಉಳಿದ ಸೀಟುಗಳಿಗೆ ಪ್ರವೇಶ ಪರೀಕ್ಷೆ ನಡೆಸುವ ಬಗ್ಗೆ.

ಓದಲಾಗಿದೆ : ದಿ: 09-03-2016 ರಂದು ನಡೆದ ಸ್ನಾತಕೋತ್ತರ ಪ್ರವೇಶ ಪರೀಕ್ಷಾ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

2016-17ನೇ ಸಾಲಿನ ಸ್ನಾತಕೋತ್ತರ ದಂತ ವೈದ್ಯಕೀಯ ಡಿಗ್ರಿ/ಡಿಪ್ಲೊಮಾ ಕೋರ್ಸುಗಳಿಗೆ ಸಂಬಂಧಿಸಿದಂತೆ ನಡೆಸಲಾದ ಎಐಪಿಜಿಡಿಇಇ-2016 ರಲ್ಲಿ ಒಟ್ಟು ಲಭ್ಯವಾಗಲಿರುವ ಸೀಟುಗಳಲ್ಲಿ ಕೇವಲ 149 ಅಭ್ಯರ್ಥಿಗಳು ಮಾತ್ರ 50% ಗಿಂತ ಹೆಚ್ಚು ಅಂಕಗಳನ್ನು ಗಳಿಸಿರುವುದರಿಂದ ಹೆಚ್ಚಿನ ಸೀಟುಗಳು ಖಾಲಿ ಉಳಿಯಲಿವೆ. ಆದ್ದರಿಂದ ಬಾಕಿ ಉಳಿಯುವ ಸೀಟುಗಳನ್ನು ಭರ್ತಿ ಮಾಡುವ ಸಲುವಾಗಿ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ನಡೆಸಿದಂತೆ ರಾಜ್ಯಮಟ್ಟದ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯೊಂದನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲು ಮೇಲೆ ಓದಲಾದ ನಡವಳಿಗಳಲ್ಲಿ ಸ್ನಾತಕೋತ್ತರ ಪ್ರವೇಶ ಪರೀಕ್ಷಾ ಸಮಿತಿಯು ತೀರ್ಮಾನ ಕೈಗೊಂಡಿರುತ್ತದೆ. ಅದರಂತೆ ಸರ್ಕಾರಿ ಆದೇಶವನ್ನು ಹೊರಡಿಸಲು ವೈದ್ಯಕೀಯ ಶಿಕ್ಷಣ ನಿರ್ದೇಶಕರು ಸರ್ಕಾರವನ್ನು ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ 2016-17ನೇ ಸಾಲಿನ ಸ್ನಾತಕೋತ್ತರ ದಂತ ವೈದ್ಯಕೀಯ ಡಿಗ್ರಿ/ಡಿಪ್ಲೊಮಾ ಕೋರ್ಸುಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿಯಲಿರುವ ಸೀಟುಗಳನ್ನು ಭರ್ತಿ ಮಾಡುವ ಸಲುವಾಗಿ ರಾಜ್ಯಮಟ್ಟದ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲು ಹಾಗೂ ಸದರಿ ಫಲಿತಾಂಶವನ್ನಾಧರಿಸಿ, 2ನೇ ಸುತ್ತಿನ ವಿಸ್ತೃತ ಆಫ್‌ಲೈನ್ ಕೌನ್ಸಿಲಿಂಗ್ ನಂತರ ಖಾಲಿ ಉಳಿಯುವ ಸೀಟುಗಳನ್ನು ನಿಯಮಾನುಸಾರ ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 69 ಆರ್‌ಜಿಯು 2016, ಬೆಂಗಳೂರು, ದಿನಾಂಕ: 22-03-2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2016-17ನೇ ಸಾಲಿನ ಸ್ನಾತಕೋತ್ತರ ದಂತ ವೈದ್ಯಕೀಯ ಡಿಗ್ರಿ/ಡಿಪ್ಲೊಮಾ ಕೋರ್ಸುಗಳಲ್ಲಿ ಬಾಕಿ ಉಳಿಯಲಿರುವ ಸೀಟುಗಳನ್ನು ಭರ್ತಿ ಮಾಡುವ ಸಲುವಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ರಾಜ್ಯಮಟ್ಟದ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯನ್ನು ನಡೆಸಲು ಹಾಗೂ ಸದರಿ ಫಲಿತಾಂಶವನ್ನಾಧರಿಸಿ, 2ನೇ ಸುತ್ತಿನ ವಿಸ್ತೃತ ಆಫ್‌ಲೈನ್ ಕೌನ್ಸಿಲಿಂಗ್ ನಂತರ ಖಾಲಿ ಉಳಿಯುವ ಸೀಟುಗಳನ್ನು ನಿಯಮಾನುಸಾರ ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡಲು ಅನುಮತಿ ನೀಡಿ ಆದೇಶಿಸಿದೆ.

PR-257

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಮುರಳಿ
ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

ಆರ್ಥಿಕ ಸಚಿವಾಲಯ

ವಿಷಯ : ಚಲನ ವೈಕಲ್ಯ ಹೊಂದಿರುವ ಮಕ್ಕಳಿರುವ ಸರ್ಕಾರಿ ನೌಕರರಿಗೆ ಪೋಷಣಾ ಭತ್ಯೆಯ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012 (XII), ದಿನಾಂಕ: 10-06-2013.

ಪ್ರಸ್ತಾವನೆ:

2011ರ ಅಧಿಕಾರಿ ವೇತನ ಸಮಿತಿಯ ಶಿಫಾರಸ್ಸಿನನ್ವಯ ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಚಲನ ವೈಕಲ್ಯತೆ ಮತ್ತು ಅಂಗವಿಕಲತೆಯಿಂದಾಗಿ ಮನೆಯಲ್ಲಿಯೇ ಉಳಿದುಕೊಳ್ಳುವ ಹಾಗೂ ಶಾಲೆಗಳಿಗೆ ಹೋಗಲು ಅಸಮರ್ಥರಾಗಿ ಪೋಷಕರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವ ಸರ್ಕಾರಿ ನೌಕರರ ಮಕ್ಕಳ ಪಾಲನೆ/ಪೋಷಣೆ ಮಾಡುವುದಕ್ಕಾಗಿ ಒಂದು ಮಗುವಿಗೆ ಮಾಸಿಕ ತಲಾ ರೂ.500/-ಗಳ ದರದಲ್ಲಿ ಗರಿಷ್ಠ 2 ಮಕ್ಕಳಿಗೆ ಮಾತ್ರ ಪೋಷಣಾ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಮೇಲೆ ಓದಲಾದ ಆದೇಶದನ್ವಯ "Autism, Cerebral Palsy or Mental retardation" ಹೊಂದಿರುವ ಮಕ್ಕಳ ಪೋಷಣೆಗೆ ಸರ್ಕಾರಿ ನೌಕರರಿಗೆ ಪೋಷಣಾ ಭತ್ಯೆಯನ್ನು ನೀಡಬಹುದೇ ಎಂಬ ಬಗ್ಗೆ ಹಲವು ಇಲಾಖೆಗಳು ಸರ್ಕಾರದ ಸ್ಪಷ್ಟೀಕರಣವನ್ನು ಕೋರಿರುತ್ತವೆ. ಅದನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಎಸ್‌ಆರ್‌ಪಿ 2016, ಬೆಂಗಳೂರು, ದಿನಾಂಕ: 19-01-2016.

ದಿನಾಂಕ: 10-06-2013ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012, (XII) ರಡಿಯಲ್ಲಿನ ಪೋಷಣಾ ಭತ್ಯೆಯ ಸೌಲಭ್ಯವು **"Autism, Cerebral Palsy or Mental retardation"** ಈ ವೈಕಲ್ಯತೆ/ಸಮಸ್ಯೆಗಳಿಂದ ಬಳಲುತ್ತಿದ್ದು, ಶಾಲೆಗಳಿಗೆ ಹೋಗಲು ಅಸಮರ್ಥರಾಗಿ ಪೋಷಕರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವ ಸರ್ಕಾರಿ ನೌಕರರ ವಿಶೇಷ ಮಕ್ಕಳ ಪೋಷಣೆಗೆ ಅನ್ವಯವಾಗುತ್ತದೆ ಎಂದು ಈ ಮೂಲಕ ಆದೇಶಿಸಿದೆ. ಉಳಿದಂತೆ, ಪೋಷಣಾ ಭತ್ಯೆಯನ್ನು ನೀಡಲು ವಿಧಿಸಿರುವ ಇತರೆ ಷರತ್ತುಗಳು ಮುಂದುವರೆದು ಅನ್ವಯವಾಗುತ್ತವೆ.

PR-258

SC-100

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಸ್. ರಾಜಲಕ್ಷ್ಮಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ. (ಸೇವೆಗಳು-2)

ಆರ್ಥಿಕ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಆಇ 5 ಸಾವಿಯೋ 2014, ಬೆಂಗಳೂರು, ದಿನಾಂಕ: 10-03-2016.

ಖಜಾನೆ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಗ್ರೂಪ್ ಸಿ ಸಿಬ್ಬಂದಿಗೆ ತರಬೇತಿ ನೀಡುವ ಕುರಿತು ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು, ಮೈಸೂರು ಆಡಳಿತ ತರಬೇತಿ ಸಂಸ್ಥೆಯ ಸಮನ್ವಯಾಧಿಕಾರಿ, ಖಜಾನೆ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಮುಖ್ಯಸ್ಥರುಗಳ ಪಾತ್ರವನ್ನು ನಿಗಧಿಪಡಿಸಿರುವ ಸರ್ಕಾರಿ ಆದೇಶ ಸಂಖ್ಯೆ:ಆಇ 5 ಸಾವಿಯೋ 2014, ದಿನಾಂಕ: 15-09-2015ರ ಆದೇಶ ಭಾಗದಲ್ಲಿ ಈ ಕೆಳಕಂಡ ಪಟ್ಟಿಯ ಕಾಲಂ-1ರಲ್ಲಿರುವ ನಮೂದುಗಳನ್ನು ಕಾಲಂ-2ರಲ್ಲಿರುವಂತೆ ದಿನಾಂಕ:15-09-2015ರಿಂದಲೇ ಜಾರಿಗೆ ಬರುವಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಪ್ರಸ್ತುತ ಇರುವುದು	ತಿದ್ದಿ ಓದಿಕೊಳ್ಳಬೇಕಾದದ್ದು
1	2
a. ಪಠ್ಯಕ್ರಮವನ್ನು ಸಿದ್ಧಪಡಿಸುವುದು **(Preparation of curriculum).** ಸಂಬಂಧಿಸಿದ ಇಲಾಖೆಗಳು ಪಠ್ಯಕ್ರಮವನ್ನು ವಿನ್ಯಾಸ ಮಾಡಲು ಇಲಾಖೆಯ ಹಾಲಿ ಕಾರ್ಯನಿರ್ವಹಿಸುತ್ತಿರುವ/ ನಿವೃತ್ತ ಅಧಿಕಾರಿಗಳು, ವಿಷಯತಜ್ಞರು ಹಾಗೂ ವಿತ್ತೀಯ ಕಾರ್ಯನೀತಿ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡ ಪಠ್ಯಕ್ರಮ ರಚನಾ ಸಮಿತಿಯನ್ನು ರಚಿಸುವುದು. B. ಪಠ್ಯಕ್ರಮ ವಿನ್ಯಾಸಗೊಳಿಸುವಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಯ ಪ್ರತಿನಿಧಿಗಳು ಭಾಗವಹಿಸತಕ್ಕದ್ದು.	a. ಪಠ್ಯಕ್ರಮವನ್ನು ಸಿದ್ದಪಡಿಸುವುದು **(Preparation of curriculum).** ಈ ಕಾರ್ಯವನ್ನು ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗಳು ತಮ್ಮ ಹಂತದಲ್ಲಿ ಇಲಾಖೆಯ ಬಗ್ಗೆ ಕಾರ್ಯಾಚರಣೆಯ ಮಾಹಿತಿಯಿರುವ ವಿಷಯತಜ್ಞರನ್ನು ಒಳಗೊಂಡಂತೆ ಸಮಿತಿ ರಚಿಸಬಹುದಾಗಿದ್ದು, ವಿತ್ತೀಯ ಕಾರ್ಯನೀತಿ ಸಂಸ್ಥೆಯ ಪ್ರತಿನಿಧಿ ಸದರಿ ಸಮಿತಿಗಳಿಗೆ ತಾಂತ್ರಿಕ ನೆರವನ್ನು ನೀಡಿ ಪಠ್ಯಕ್ರಮವನ್ನು ಸಿದ್ಧಪಡಿಸುವುದಕ್ಕೆ ನೆರವಾಗುತ್ತದೆ.
5. ಉಸ್ತುವಾರಿ ಹಾಗೂ ಮೌಲ್ಯಮಾಪನ **(Monitoring & evaluation)** ಸಂಬಂಧಿಸಿದ ಇಲಾಖಾ ಮುಖ್ಯಸ್ಥರು ತರಬೇತಿ ಕಾರ್ಯಕ್ರಮಗಳ ನಿರ್ವಹಣೆ ಹಾಗೂ ಪ್ರಶಿಕ್ಷಣಾರ್ಥಿಗಳ ಕಾರ್ಯನಿರ್ವಹಣೆಯ ಮೌಲ್ಯಮಾಪನವನ್ನು ಮಾಡತಕ್ಕದ್ದು. b. ಉಸ್ತುವಾರಿ ಹಾಗೂ ಮೌಲ್ಯಮಾಪನ **(Monitoring & evaluation)** ತರಬೇತಿ ಅಂತ್ಯದಲ್ಲಿ ಶಿಕ್ಷಣಾರ್ಥಿಗಳು ಪಡೆದ ತರಬೇತಿಯ ಉಪಯುಕ್ತತೆ ಬಗ್ಗೆ ಆಂತರಿಕ ಮೌಲ್ಯಮಾಪನ (Internal Assessment)ವನ್ನು ಏರ್ಪಡಿಸುವುದು ಹಾಗೂ ಮೌಲ್ಯಮಾಪನದ ಫಲಿತಾಂಶವನ್ನು ಇಲಾಖೆಗಳಿಗೆ ಒದಗಿಸುವುದು. ಇಲಾಖೆಯ ಮುಖ್ಯಸ್ಥರು ನೀಡುವ ತರಬೇತಿಯ ಬಗ್ಗೆ (ಗ್ರೂಪ್ 'ಎ', 'ಬಿ' ಮತ್ತು 'ಸಿ') ಇವರ ಪ್ರಗತಿಯ ವಿವರವನ್ನು ಸರ್ಕಾರಕ್ಕೆ ಪ್ರತಿ ತಿಂಗಳು 15ನೇ ತಾರಿಖಿನೊಳಗಾಗಿ ಮಾಸಿಕ ಪ್ರಗತಿ ಒದಗಿಸುವುದು.	5. ಉಸ್ತುವಾರಿ ಹಾಗೂ ಮೌಲ್ಯಮಾಪನ **(Monitoring & evaluation)** ತರಬೇತಿಯು ವಿವಿಧ ಸಂಸ್ಥೆಗಳಲ್ಲಿ ನಡೆಯುವುದರಿಂದ, ಇದರ ಪರಿಣಾಮಕಾರತ್ವವನ್ನು ಹಾಗೂ ಗ್ರೂಪ್-ಸಿ ಉದ್ಯೋಗಿಗಳ ಕಾರ್ಯಕ್ಷಮತೆಯನ್ನು ನಿರ್ಧರಿಸಲು ಸಂಸ್ಥೆಯಿಂದ ಸಾಧ್ಯವಿಲ್ಲ. ಸಂಬಂಧಿಸಿದ ಇಲಾಖೆಗಳು ಈ ಜವಾಬ್ದಾರಿಯನ್ನು ತಮ್ಮ ಅಧಿಕಾರಿಗಳ ಮೂಲಕ ಅಥವಾ ತಜ್ಞರನ್ನು ನೇಮಿಸುವುದರ ಮೂಲಕ ನಿರ್ವಹಿಸಬಹುದಾಗಿದೆ. ಈ ನಿಟ್ಟಿನಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆ ತಪಶೀಲು ಪಟ್ಟಿಯನ್ನು (ಚೆಕ್‌ಲಿಸ್ಟ್) ತಯಾರಿಸಿ ಸಂಬಂಧಿಸಿದ ಇಲಾಖೆಗಳೊಂದಿಗೆ ಹಂಚಿಕೊಳ್ಳುವುದು. ಇದರ ಆಧಾರದ ಮೇಲೆ ಇಲಾಖೆಗಳು ತರಬೇತಿಗಳ ಉಸ್ತುವಾರಿ ಹಾಗೂ ಉದ್ಯೋಗಿಗಳ ಸಾಮರ್ಥ್ಯ - ವರ್ಧನೆ ಕುರಿತು ಮೌಲ್ಯಮಾಪನವನ್ನು ಕೈಗೊಳ್ಳಬಹುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಲಕ್ಷ್ಮಣ,

PR-259

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ. (ಆಡಳಿತ ಮತ್ತು ಮುಂಗಡಗಳು)

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಆರ್ಥಿಕ ಸಚಿವಾಲಯ

ವಿಷಯ : ಪೊಲೀಸ್ ಇಲಾಖೆಯ ಸಿಐಡಿ ಘಟಕದ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಹುದ್ದೆಯ ವೇತನ ಶ್ರೇಣಿಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 229 ಪಿಇಬಿ 73, ದಿನಾಂಕ: 15–04–1974.
2) ಸರ್ಕಾರದ ಆದೇಶ ಸಂ:ಒಇ 127 ಸಿಓಡಿ 08, ದಿನಾಂಕ: 03–06–2009.

ಪ್ರಸ್ತಾವನೆ:

ಪೊಲೀಸ್ ಇಲಾಖೆಯ ಸಿ.ಓ.ಡಿ ವಿಭಾಗಕ್ಕೆ 1994ರಲ್ಲಿ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಯಿತು. ಅದರಲ್ಲಿ ಡಿಟೆಕ್ಟಿವ್ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯ ನೇಮಕಾತಿಗೆ ಹೆಚ್ಚಿನ ವಿದ್ಯಾರ್ಹತೆಯಾದ ಕಾನೂನು ಪದವಿಯನ್ನು ನಿಗಧಿಪಡಿಸಿ ಈ ಹುದ್ದೆಗೆ ಹಾಗೂ ಪದೋನ್ನತಿ ಹುದ್ದೆಯಾದ ಡಿಟೆಕ್ಟಿವ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಹೆಚ್ಚಿನ ವೇತನ ಶ್ರೇಣಿಯನ್ನು ನಿಗಧಿಪಡಿಸಲಾಯಿತು. ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ ಡಿಟೆಕ್ಟಿವ್ ಇನ್ಸ್‌ಪೆಕ್ಟರ್‌ಗಳು ಭವಿಷ್ಯದಲ್ಲಿ ಉನ್ನತ ಹುದ್ದೆಗೆ ಪದೋನ್ನತಿ ಹೊಂದುವಾಗ, ಆ ಹುದ್ದೆಗೆ ಹೆಚ್ಚಿನ ವೇತನ ಶ್ರೇಣಿ ನೀಡುವುದನ್ನು ಪರಿಶೀಲಿಸಲಾಗುವುದು ಎಂದು ಆಡಳಿತಾತ್ಮಕ ನಿರ್ಣಯ ಕೂಡ ಸರ್ಕಾರವು ತೆಗೆದುಕೊಂಡಿತ್ತು.

ಸಿ.ಓ.ಡಿ. (COD) ವಿಭಾಗವನ್ನು ಸಿ.ಐ.ಡಿ (CID) ಎಂದು 2009ರಲ್ಲಿ ಪುನರ್‌ನಾಮಕರಣ ಮಾಡಲಾಗಿದೆ.

ಪ್ರಸ್ತುತ ಒಳಾಡಳಿತ ಇಲಾಖೆಯು, ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದ ಡಿಟೆಕ್ಟಿವ್ ಇನ್ಸ್‌ಪೆಕ್ಟರ್‌ಗಳು ಸಿ.ಐ.ಡಿ.ಯ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಹುದ್ದೆಗೆ ಮುಂಬಡ್ತಿ ಹೊಂದಿರುವ ಪ್ರಯುಕ್ತ ಈ ಹುದ್ದೆಗೆ ಹೆಚ್ಚಿನ ವೇತನ ಶ್ರೇಣಿಯನ್ನು ನಿಗಧಿಪಡಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 8 ಎಸ್‌ಆರ್‌ಪಿ 2016, ಬೆಂಗಳೂರು, ದಿನಾಂಕ: 23–03–2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರಿಕ ಸೇವಾ (ಪರಷ್ಕೃತ ವೇತನ) ನಿಯಮಗಳು 2012ರ ನಿಯಮ 4ರ ಉಪ ನಿಯಮ (2)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕೆಳಗಿನ ಪಟ್ಟಿಯ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗೆ ಅನ್ವಯವಾಗುವಂತೆ ವೇತನ ಶ್ರೇಣಿಯನ್ನು ಪಟ್ಟಿಯಲ್ಲಿನ ಅಂಕಣ (3)ರಲ್ಲಿ ನಮೂದಿಸಿರುವ ವೇತನ ಶ್ರೇಣಿಗೆ ಬದಲಾಗಿ ಅಂಕಣ (4)ರಲ್ಲಿ ನಮೂದಿಸಿರುವ ಪರಿಷ್ಕೃತ ವೇತನ ಶ್ರೇಣಿ ಆಗಿರತಕ್ಕದೆಂದು ಈ ಮೂಲಕ ಆದೇಶಿಸಿದೆ.

ಇಲಾಖೆ	**ಹುದ್ದೆ**	**ಪ್ರಸ್ತುತ 2012ರ ವೇತನ ಶ್ರೇಣಿ (₹.)**	**ಪರಿಷ್ಕೃತ 2012ರ ವೇತನ ಶ್ರೇಣಿ (₹..)**
(1)	(2)	(3)	(4)
ಪೊಲೀಸ್ ಇಲಾಖೆ	ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಸಿ.ಐ.ಡಿ)	28100–50100	30400–51300

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ.

ಮೇಲಿನ ಪಟ್ಟಿಯಲ್ಲಿ ನಮೂದಿಸಿರುವ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಗಳ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 43ರಲ್ಲಿ ಕಲ್ಪಿಸಿರುವ ಅವಕಾಶಗಳ ಅನುಸಾರ ನಿಗಧಿಪಡಿಸತಕ್ಕದ್ದು.

PR-260

SC-100

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಸ್. ರಾಜಲಕ್ಷ್ಮಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸೇವೆಗಳು–2)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59